MYSORE LEGISLATIVE ASSEMBLY.

Friday, 29th July 1966.

The House met in the Assembly Chamber, Vidhana Soudha, Bangalore, at One of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS
(to which oral answers were given)

Confirmation of Lands Granted for Temporary Cultivation.

*Q.—529. Sri C. R. RANGE GOWDA (Magadi).—

Will the Minister for Revenue be pleased to state :—

(*a*) the number of cases of which the lands granted to the ryots for temporary cultivation that are still remain without being confirmed in each village of Magadi Taluk ;

(*b*) for how many years such lands are being cultivated without being confirmed ;

(*c*) what steps they have taken to confirm those lands to the ryots ?

A.—Sri M. V. KRISHNAPPA (Minister for Revenue).—

(*a*) *Vide* Statement appended.

(*b*) Since 1947-48.

(*c*) Instructions have been issued to the Deputy Commissioner to take expeditious action to confirm or cancel the grants, as the case may be, according to rules.

STATEMENT.

Sl. No.	*Name of the Village*	*No. of cases*
	I. Kasaba Hobli	
1.	Kalari	1
2.	Byalakere	1
3.	Panakanakallu	2
4.	Thimmasandra	1
5.	Kondahalli	1
6.	Taggikuppe	1
7.	Bachenahalli	1

(SRI M. V. KRISHNAPPA)

Sl. No.	*Name of the Village*	*No. of cases*
	II. Kudoor Hobli	
8.	Narasandra	1
9.	Kanusandra	1
10.	Malligunse	1
11.	Sugganahalli	1
12.	Hanumapura	1
13.	Ajjahalli	1
14.	Adasangi	1
	III. Tavarekere Hobli	
15.	Chekkellur Rampur	1
16	Muddayyanapalya	1
17	Ajjanahalli	1
	IV. Soloor Hobli	
18.	Hyeganahalli	1
19.	Narasapura	1
20.	Bhantorekuppe	2
21.	Linganahalli	1
22.	Goroor	1
23.	Lakkenahalli	1
24.	Hosahalli	1
25.	Marikuppe	1
26.	Muppenahalli	1
27.	Mallur	2
	V. Modbal Hobli	
28.	Veerapura	2
29.	Ajjanahalli	3
30.	Manehavabele	1
31.	Dabbagottige	1
32.	Athimgere	1
33.	Heligehalli	1
34.	Mordagondala	1
35.	Nagamangale	1
36.	Sannenahalli	1
37.	Lakkasandra	1
38.	Karalamangala	3
39.	Sambadevanahalli	1

ಶ್ರೀ ಸಿ. ಆರ್. ರಂಗೇಗೌಡ.—ಮಾಗಡಿ ತಾಲ್ಲೂಕಿನಿಂದ ಇನ್ನೂ ಖಾಯಂ ಮಾಡದೇ ಉಳಿದಿರುವ ಪ್ರಕರಣಗಳ ಸಂಖ್ಯೆ 47 ಎಂದು ಹೇಳಿದ್ದೀರಿ, ಆದರೆ 1947-48ನೇ ಸಾಲಿನಿಂದ ನೂರಾರು ಅರ್ಜಿಗಳ ಸಂಬಂಧದಲ್ಲಿ ಖಾಯಂ ಆಗದೆ ಪೆಂಡಿಂಗ್ ಇವೆ, ಅವುಗಳನ್ನೆಲ್ಲಾ ಜರೂರಾಗಿ ಖಾಯಂ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ನರ್ಕಾರಿ ನೋಟಿಫಿಕೇಷನ್ ಪ್ರಕಾರ ಹಂಗಾಮಿಯಾಗಿ ಕೊಟ್ಟಿರುವ ಜಮೀನುಗಳನ್ನು ಕಾಯಂ ಮಾಡಬೇಕೆಂದು ಇದೆ. Unless they are for essential purposes like Government use ; —ನರ್ಕಾರದ ಉಪಯೋಗಕ್ಕೆ ಬೇಡವಾದ ಜಮೀನು ಗಳನ್ನು ಧಾರಾಳವಾಗಿ ಜನರಿಗೆ ಕೊಡಬಹುದೆಂದು ಅಧಿಕಾರಿಗಳಿಗೆ ಆದೇಶ ಕೊಟ್ಟಿದೆ. ಆದರೆ ಮಾಗಡಿ ತಾಲ್ಲೂಕಿನಲ್ಲಿ ಏಕೆ ಮಾಡಿಲ್ಲವೆಂದು ಗೊತ್ತಿಲ್ಲ. ವಿಚಾರಿಸಿ ಹೇಳುತ್ತೇನೆ. 1947ರಿಂದ ಮಾಡಿಲ್ಲವೆಂದು ಹೇಳುತ್ತಾರೆ. ಅದರಲ್ಲಿ ಬಹುಶಃ ಡಿಸ್‌ಕ್ರಿಪೆನ್ಸಿ ಇರಬಹುದು. ಸಾಧ್ಯವಾದಷ್ಟು ಬೇಗ ಮಾಡುವುದಕ್ಕೆ ಆದೇಶ ಕೊಡುತ್ತೇವೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—5 ವರ್ಷದಿಂದ ಯಾರು ಯಾರು ಜಮೀನುಗಳನ್ನು ಸಾಗುವಳಿ ಮಾಡಿರುತ್ತಾರೋ ಅವರಿಗೇ ಧರ್ಮ ಮಾಡುವುದು ನರ್ಕಾರದ ಉದ್ದೇಶವಾಗಿರಬೇಕು. ಅವರಿಗೆ ಸಾಗುವಳಿ ಮಾಡುವುದಕ್ಕೆ ಉತ್ತೇಜನ ಸಿಗುತ್ತದೆ. ಆದ್ದರಿಂದ ಯಾರು ಯಾರು 5 ವರ್ಷ ದಿಂದ ಹಂಗಾಮಿಯಾಗಿ ಸಾಗು ಮಾಡುತ್ತಿದ್ದಾರೋ ಅವರಿಗೆ ಸಿಗುವಂತೆ ನರ್ಕಾರಿ ಆಜ್ಞೆಯನ್ನು ಹೊರಡಿಸುವುದಕ್ಕೆ ಏನು ಹೇಳುತ್ತೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದೇ ರೀತಿ ಮಾಡಬೇಕೆಂದು 1962-63ರಲ್ಲಿ ಒಂದು ಚಳುವಳಿ ಮಾಡಿ ನಾನು ಅನೇಕ ತಾಲ್ಲೂಕುಗಳಿಗೆ ಟೂರು ಹೋದಾಗ ಸುಮಾರು 60-70 ಸಾವಿರ ಎಕರೆ ಪಟ್ಟೆದಾನವೆಂದು ಜನರಿಗೆ ಹಂಚಿದ್ದೇನೆ. ಅಲ್ಲದೆ ಸ್ಥಳದಲ್ಲೇ ಸಾಗುವಳಿ ಚೀಟಿಯನ್ನು ಕೊಡಿಸಿದ್ದೇನೆ. ಆದರೆ ಕೆಲವು ತಾಲ್ಲೂಕುಗಳಲ್ಲಿ ಚಿಲ್ಲರೆ ಬಾಬತ್ತುಗಳು ಉಳಿದುಹೋಗಿವೆ. ಸಾಧ್ಯವಾದಷ್ಟು ಬೇಗ ಹಂಚುವುದಕ್ಕೆ ಅಧಿಕಾರಿಗಳಿಗೆ ಸೂಚನೆ ಕೊಡುತ್ತೇವೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಸಾಮಾನ್ಯವಾಗಿ 5ವರ್ಷ ಯಾರು ಸಾಗುವಳಿ ಮಾಡು ತ್ತಾರೋ ಅವರಿಗೆ ಟೆನೆನ್ಸಿ ಆಕ್ಟ್ ಪ್ರಕಾರ ಆ ಜಮೀನಿನ ಮೇಲೆ ಹಕ್ಕು ಬರುತ್ತದೆ. ಆದ್ದರಿಂದ ಅವರು ಆ ಜಮೀನನ್ನು ತಮ್ಮ ಹೆಸರಿಗೆ ಮಾಡಿಸಿಕೊಳ್ಳಲು ತಾಲ್ಲೂಕ್ ಆಫೀಸ್‌ಗಳಿಗೆ ತಿರುಗುತ್ತಿರು ತ್ತಾರೆ. ಆದ್ದರಿಂದ ಯಾರು ಯಾರು ಹಂಗಾಮಿಯಾಗಿ 5 ವರ್ಷ ಸಾಗುವಳಿ ಮಾಡಿರುತ್ತಾರೋ, ಅಂಥವರಿಗೆ ಅವರು ಅರ್ಜಿಗಳನ್ನು ಕೊಡದೆ ಅವರ ಹೆಸರಿಗೆ ಮಾಡಿಸುವುದಕ್ಕೆ ಅಧಿಕಾರಿಗಳಿಗೆ ಆದೇಶ ಕೊಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ತಾವು ಹೇಳಿದ ಪ್ರಕಾರ ಯಾರು 5 ವರ್ಷ ಸಾಗುವಳಿ ಮಾಡಿರು ತ್ತಾರೋ, ಅವರಿಗೆ ಆ ಜಮೀನಿನ ಮೇಲೆ ಟೆನೆನ್ಸಿ ಆಕ್ಟ್ ಪ್ರಕಾರ ಹಕ್ಕಿರುತ್ತದೆ. ಕಂದಾಯ ಕಟ್ಟುತ್ತಿರುತ್ತಾರೆ. ಅವರು ಅರ್ಜಿ ಕೊಟ್ಟರೆ ಅವರ ಹೆಸರಿಗೆ ಜಮೀನು ಮಾಡುವುದು ನರ್ಕಾರದ ಕರ್ತವ್ಯವೇ. ಆದರೆ ಯಾರು ಯಾರು ಯಾವ ಜಮೀನು ಮಾಡುತ್ತಿದ್ದಾರೆ ಎಂಬುದು ನರ್ಕಾರಕ್ಕೆ ತಿಳಿಯುವುದು ಕಷ್ಟವಾಗುವುದರಿಂದ ಅವರು ಅರ್ಜಿಗಳನ್ನು ಕೊಡಬೇಕಾಗುತ್ತದೆ.

ಶ್ರೀ ಸಿ. ಆರ್. ರಂಗೇಗೌಡ.—ಮಾಗಡಿ ತಾಲ್ಲೂಕಿನಲ್ಲಿ ಬಹಳ ಬಡವರಿಗೆ 2-3 ಎಕರೆ ಜಮೀನನ್ನು ಕೊಟ್ಟಿದ್ದಾರೆ. ಅವರು ಇನ್ನೂ ಹಂಗಾಮಿಯಾಗಿ ಸಾಗುವಳಿ ಮಾಡುತ್ತಿದ್ದಾರೆ. ಸಾಲ ತೆಗೆದುಕೊಳ್ಳಲು ಅನುಕೂಲವಾಗುವಂತೆ ಜರೂರಾಗಿ ಅವರ ಹೆಸರಿಗೆ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ನನಗೂ ಅರ್ಥವಾಗುತ್ತದೆ. ಅವರ ಹೆಸರಿನಲ್ಲಿ ಜಮೀನು ಇಲ್ಲ ವಿದ್ದರೆ ತಕಾವಿ ಸಾಲ, ಬಾವಿ ಸಾಲಗಳು ಸಿಗುವುದಿಲ್ಲವೆಂದು ಸಾಧ್ಯವಾದಷ್ಟು ಬೇಗ ಮಾಡಿಕೊಡು ವಂತೆ ಅಧಿಕಾರಿಗಳಿಗೆ ಹೇಳುತ್ತಿದ್ದೇವೆ.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಅನೇಕ ಜನರು 5-6 ವರ್ಷದಿಂದ ಸಾಗುವಳಿ ಮಾಡು ತ್ತಿದ್ದರೂ ಸಹ ಅವರ ಹೆಸರನ್ನು ಗ್ರಾಮಾಧಿಕಾರಿಗಳು ಸರಿಯಾಗಿ ಕಾಣಿಸುವುದಿಲ್ಲ, ಆದ್ದರಿಂದ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ? ಪಟ್ಟೆದಾನಕ್ಕೆಂದು ತಾವು ತಿಪಟೂರಿಗೆ ಬರುತ್ತೀರೆಂದು ಎಂದೂವರೆ ತಿಂಗಳಿಂದ ಅಧಿಕಾರಿಗಳು ಮತ್ತು ರೈತರು ಕಾದಿದ್ದರು, ನೀವು ಬರಲಿಲ್ಲ, ಕಾರಣವೇನು?

ಶ್ರೀ ಎಂ. ವಿ. ಕೃಷ್ಣಪ್ಪ.—ನಾನು ತಿಪಟೂರು ತಾಲ್ಲೂಕಿಗೆ ಬರುತ್ತೇನೆಂದು ಪ್ರೋಗ್ರಾಮ್ ಕೊಟ್ಟಿಲ್ಲ. ಕೊಟ್ಟಮೇಲೆ ತಪ್ಪುವುದಿಲ್ಲ. ದೊಡ್ಡ ದೊಡ್ಡ ತಾಲ್ಲೂಕುಗಳಲ್ಲಿ 200-300 ಎಕರೆ

(ಶ್ರೀ ಎಂ. ವಿ. ಕೃಷ್ಣಪ್ಪ)

ಪಟ್ಟೆದಾನವಿದ್ದರೆ ಮಾತ್ರ ಹೋಗುತ್ತೇನೆ. 20-30 ಎಕರೆಗೆರ್ಲಾ ಬಂದರೆ ನಣ್ಣ ಪುಟ್ಟ ಬಾಬತ್ತು ಗಳಿಗೆರ್ಲಾ ಮಂತ್ರಿಗಳು ಬರುತ್ತಾರೆಂದು ತಾವು ಹೇಳುತ್ತೀರಿ. ತಮ್ಮ ತಾಲ್ಲೂಕಿನಲ್ಲಿ 100-200 ಎಕರೆ ಪಟ್ಟೆದಾನವಿದ್ದರೆ ಹೇಳಿ ಅಸೆಂಬ್ಲಿಯಾದ ಮಾರನೇ ದಿನವೇ ಬರುತ್ತೇನೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಯಾರು ಹಂಗಾಮಿಯಾಗಿ ಜಮೀನನ್ನು ಸಾಗುವಳಿ ಮಾಡುತ್ತಿದ್ದಾರೋ ಅವರ ಹೆಸರನ್ನು ಪಟೇಲರು ಮತ್ತು ಶಾನುಭೋಗರು ಬದಲಿಸಿ ಬೇರೆಯವರ ಹೆಸರಿಗೆ ಮಾಡುತ್ತಿದ್ದಾರೆ. ಆದ್ದರಿಂದ ಯಾರು ಹಂಗಾಮಿಯಾಗಿ ಜಮೀನನ್ನು ಮಾಡುತ್ತಿದ್ದಾರೋ, ಅಂಥವರ ಕೈ ತಪ್ಪಿಹೋಗದಂತೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ನನಗೂ ಆರ್ಥವಾಗುತ್ತದೆ. ಪಟೇಲರು ಮತ್ತು ಶ್ಯಾನುಭೋಗರು ಹೆಸರು ಬದಲಾವಣೆ ಮಾಡದಂತೆ ನೋಡಿಕೊಳ್ಳಲು ಅಧಿಕಾರಿಗಳಿಗೆ ತಿಳಿಸಿದ್ದೇವೆ. ಗ್ರಾಮಾಧಿಕಾರಿಗಳು ಸಹ ಸರಿಯಾಗಿರಬೇಕು. ಇಲ್ಲದಿದ್ದರೆ ಈ ರೀತಿ ನಡೆಯುತ್ತದೆ.

ಶ್ರೀ ಸಿದ್ದಯ್ಯ ಕಾಶೀಮಠ್.—ಒಂದು ನಿರ್ದಿಷ್ಟ ಸಮಯದೊಳಗೆ ಹಂಗಾಮಿಯಾಗಿ ಜಮೀನನ್ನು ಸಾಗುವಳಿ ಮಾಡುತ್ತಿರುವವರನ್ನು ಖಾಯಂ ಮಾಡಬೇಕೆಂದು ಜಿಲ್ಲಾಧಿಕಾರಿಗಳಿಗೆ ಆದೇಶ ಕೊಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಿರ್ದಿಷ್ಟ ಸಮಯ ಹಾಕುವುದಕ್ಕಾಗುವುದಿಲ್ಲ. ಜಮೀನು ವಿಷಯದಲ್ಲಿ ಅನೇಕ ಅಡಚಣೆಗಳು ಇರುತ್ತದೆ. ಕರಾರುವಾಕ್ಕಾಗಿ ಇಷ್ಟೇ ದಿನಗಳಲ್ಲಿ ಮಾಡಬೇಕೆಂದರೆ ತೊಂದರೆಯಾಗುತ್ತದೆ. ಕೆಲವು ಜಮೀನುಗಳನ್ನು ಕೊಡುವುದಕ್ಕಾಗುವುದಿಲ್ಲ. ಕೆಲವರು ಅನುಮತಿ ಇಲ್ಲದೆ ಸರ್ಕಾರಿ ಜಮೀನನ್ನು ಉತ್ತು ಬಿತ್ತುತ್ತಿರುತ್ತಾರೆ. ಕೆಲವು ಜಮೀನುಗಳಿಗೆ ಸರಿಯಾದ ರೆಕಾರ್ಡುಗಳೇ ಇರುವುದಿಲ್ಲ. ಇದನ್ನೆಲ್ಲಾ ನೋಡಿಕೊಂಡು ಎಷ್ಟು ಕೊಡಬೇಕು, ಎಷ್ಟು ಬಿಡಬೇಕು ಎಂದು ನೋಡಿಕೊಂಡು ಮಾಡಬೇಕಾಗುತ್ತದೆ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—ಸರ್ಕಾರದವರು ಈಗ ಕೊಟ್ಟಿರತಕ್ಕ ಜಮೀನುಗಳನ್ನು ಕನ್‌ಫರ್ಮ್ ಮಾಡುವುದಕ್ಕೆ ಹೆಚ್ಚಿಗೆ ಸಿಬ್ಬಂದಿ ಬೇಕಾಗಬಹುದು ಎಂದು ಉತ್ತರ ಹೇಳಿದರು. ಪ್ರತಿ ತಾಲ್ಲೂಕಿನಲ್ಲಿಯೂ ಇಂತಹ ಕೇಸುಗಳು ಎಷ್ಟು ಇರಬಹುದು ? ಈಗಿರತಕ್ಕ ಸಿಬ್ಬಂದಿಯಿಂದಲೇ ಇರತಕ್ಕ ಕೇಸುಗಳನ್ನು ಏರೇ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೇ ? ಒಂದುವೇಳೆ ಕಡಿಮೆ ಕೇಸುಗಳು ಎಲ್ಲಯಾದರೂ ಇದ್ದರೆ ಅಂತಹವುಗಳನ್ನು ಸರ್ಕಾರದವರೇ ಮಾಡಿಸುವುದಕ್ಕಾಗುತ್ತದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೆಚ್ಚಿಗೆ ಭೂಮಿ ಇರುವ ಕೆಲವು ತಾಲ್ಲೂಕುಗಳಲ್ಲಿ ಇಂತಹ ಕೇಸುಗಳು ಸಾವಿರಾರು ಇವೆ. ಆದರೆ ಭೂಮಿ ಕಡಮೆ ಇರುವಂತಹ ತಾಲ್ಲೂಕುಗಳಲ್ಲಿ ಸಾವಿರಾರು ಕೇಸುಗಳು ಬರುವುದೂ ಉಂಟು. ಬಳ್ಳಾರಿ ಒಂದೇ ಜಿಲ್ಲೆಯಲ್ಲಿ 35 ಸಾವಿರ ಪಟ್ಟಾಗಳು ಒಂದೇ ದಿನ ಒಂದೇ ತಾಲ್ಲೂಕಿನಲ್ಲಿ 5 ತಾಲ್ಲೂಕಿನ ಜನಗಳನ್ನೆಲ್ಲಾ ಒಂದುಗೂಡಿಸಿ ತೀರ್ಮಾನಮಾಡಲ್ಪಟ್ಟವೆ. ಇದೇರೀತಿ ಬೇರೆ ಜಿಲ್ಲೆಗಳಲ್ಲಿಯೂ ಮಾಡಿದರೆ ಎಲ್ಲವೂ ಸರಿಹೋಗುತ್ತದೆ. ಅಲ್ಲಿನ ಜಿಲ್ಲಾಧಿಕಾರಿಗಳು ಉತ್ಸಾಹದಿಂದ ಆ ರೀತಿ ಮಾಡಿದರು. ಬೇರೆಯವರೂ ಆ ರೀತಿ ಮಾಡಿದರೆ ಸಂತೋಷ.

ಶ್ರೀ ಸಿ. ಆರ್. ರಂಗೇಗೌಡ.—ರೈತರಿಗೆ ಹಂಗಾಮಿ ಚೀಟಿಗಳನ್ನು ಕೊಡುವಾಗ ಐದು ವರ್ಷಗಳ ಕಂದಾಯ ಹಾಕಿದ್ದಾರೆ. ಟಿ. ಟಿ. ಹಾಕಿದ್ದಾರೆ. ಅದನ್ನು ಈಗಲೇ ವಸೂಲುಮಾಡುತ್ತೇವೆಂದು ಹೇಳುತ್ತಾರೆ. ಅವಿದ್ಯಾವಂತ ರೈತರಿಗೆ ಈ ವಿಷಯ ಗೊತ್ತಿಲ್ಲದೆ ಕಂದಾಯವನ್ನು ಹಾಕಿದಷ್ಟನ್ನು ಕೊಡುತ್ತಿದ್ದರೂ ಅವರಿಗೆ ಬೇಕಾದ ಯೋಜನೆಗಳು ಕಾರ್ಯಗತವಾಗುತ್ತಿಲ್ಲ. ಆದ್ದರಿಂದ ಈಗಲಾದರೂ ತಾತ್ಕಾಲಿಕವಾಗಿ ಸಾಗುವಳಿಗೆ ಕೊಟ್ಟಿರತಕ್ಕ ಜಮೀನುಗಳನ್ನು ಅಲ್ಲಿಯೇ ಖಾಯಂ ಮಾಡಲು ವ್ಯವಸ್ಥೆಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಸರ್ಕಾರ ಇತ್ತೀಚೆಗೆ ಆಯವ್ಯಯ ಅಧಿವೇಶನದಲ್ಲಿ ಒಂದು ಅನೌನ್ಸ್ ಮಾಡಿತ್ತು. ಯಾರು ಬಗರ್‌ಹುಕುಂ ಸಾಗುವಳಿಮಾಡಿ ಚೀಟಿ ಹೊಂದುತ್ತಾರೋ ಅಂತಹವರು ಹಂಗಾಮಿ ಸಾಗುವಳಿ ಕಂದಾಯ ಕೊಡಬೇಕೆಂದು ಮಾಡಿದ್ದಾರೆ. ಅದರಮೇಲೆ ಮಾರ್ಕೆಟ್ ವ್ಯಾಲ್ಯುವನ್ನು ನಿಗದಿಮಾಡಿದ ಮೇಲೆ ಸರ್ಕಾರಕ್ಕೆ ಹಣ ಬರಬೇಕಾಗುತ್ತದೆ. ಸಾಧ್ಯವಾದಷ್ಟು ಬೇಗ ಪಾರಸುದಾರರಿಗೆ ಆ ಹಣವನ್ನು ಕೊಟ್ಟು ಆಮೇಲೆ ಈ ವಿಷಯದಲ್ಲಿ ಒಂದು ಪಾಲಿಸಿಯನ್ನು ಅನುಸರಿಸುತ್ತೇವೆ.

ಶ್ರೀ ಬಿ. ಚನ್ನಬೈರೇಗೌಡ.—ಈ ರೀತಿ ಕನ್‌ಫರ್ಮ್ ಮಾಡುವಾಗ ಗೋಮಾಳಕ್ಕೆ ಬೇಕಾದರೆ ಸಾರ್ವಜನಿಕರಿಗಾಗಿ ಜಮೀನಿನ ಸ್ವಲ್ಪ ಭಾಗವನ್ನು ರಿಸರ್ವ್ ಮಾಡುತ್ತೇವೆಂದು ಒಂದು ಸಾರಿ

ಹಿಂದೆಯೇ ಹೇಳಿದ್ದಾರೆ. ಗೋಮಾಳಕ್ಕೆಂದು ರೂರ್ಸ್ ಪ್ರಕಾರ ಸ್ವಲ್ಪಭಾಗವನ್ನು ಬಿಟ್ಟು ಅದನ್ನು ಕನ್‌ಫರ್ಮ್ ಮಾಡುವಾಗ ಗೋಮಾಳಕ್ಕೆ ಕೊಡಬೇಕೆಂದು ಉಳಿಸಿಕೊಳ್ಳುವುದಕ್ಕಾಗುತ್ತದೆಯಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಒಂದು ಸಾರಿ ಕೊಟ್ಟಾದಮೇಲೆ ಆಯಿತು. ಜನಗಳಿಗೇ ಇಲ್ಲದೇ ಇರುವಾಗ ದನಗಳಿಗೇನು ಎಂಬುದಾಗಿ ಅನೇಕರು ವಾದ ಮಾಡುತ್ತಾರೆ. ಒಂದು ಸಾರಿ ಬಡವರಿಗೆ ಆ ರೀತಿ ಕೊಟ್ಟಾದಮೇಲೆ ಆಯಿತು. ಪುನಃ ಅದನ್ನೇ ಗೋಮಾಳಕ್ಕೆ ಬಿಟ್ಟುಕೊಡಿ ಎಂಬುದಾಗಿ ಕೇಳುವುದು ಸರ್ಕಾರಕ್ಕೆ ಆಗುವುದಿಲ್ಲ. ಸರ್ಕಾರ ಆ ರೀತಿ ತೆಗೆದುಕೊಂಡು ಕೊಡುವುದಕ್ಕಾಗುವುದಿಲ್ಲ.

Sri V. S. PATIL.—Sir, just now, the Hon'ble Minister was pleased to say that these cultivating tenants of Government, are to pay the market price of the lands.....

Mr. SPEAKER.—They are not tenants ; they are trespassers !

Sri M. V. KRISHNAPPA.—There are two types of cases combined here. Those who got land under G.M.F. scheme during the War, were just allotted 2 acres of land and it was not measured, and land revenue was collected for two acres. Such people get at a concession price. But there are farmers who have unauthorisedly encroached upon the Government land and have raised gardens, plantations, coffee estates and so on, and such people have to pay a penalty. We have decided to demand from them as penalty at least the market price.

Sri V. S. PATIL.—Sir, I have no objection to what the Hon'ble Minister said. With regard to Belgaum and Khanapur Taluks, for persons who were cultivating lands for 10 to 15 years, the order by the Hon'ble Minister has been passed to give lands to them permanently on occupancy rights in 1962. But, still those orders have not been executed because the Village Officers or the officers concerned are insisting on the persons concerned to pay the market price. Has it come to the notice of the Government that such things are being done by the officers concerned ?

Sri M. V. KRISHNAPPA.—Government know most of those cases. That is why we have brought an Act to abolish the heriditary rights of the village officers so that the Government will have full control over these officers in future.

ಶ್ರೀ ಎಚ್. ಆರ್. ಕೇಶವಮೂರ್ತಿ.—ಈಗ ಹಂಗಾಮಿ ಸಾಗು ಬಹಳವಾಗಿ ಸಂಪೂರ್ಣವಾಗಿ ಬಡವರೇ ಅದನ್ನು ಮಾಡುತ್ತಿದ್ದಾರೆ. ಅಂತವರಿಗೆ ಇವತ್ತು ಎತ್ತುಗಳನ್ನು ಕೊಂಡುಕೊಳ್ಳುವುದಕ್ಕೆ ತುಂಬಾ ತೊಂದರೆಯಾಗಿದೆ. ಆದ್ದರಿಂದ ಹಂಗಾಮಿ ಸಾಗು ಮಾಡುವವರಿಗೆ ಅಲ್ಪ ಕಾಲಾವಧಿ ಮೇಲೆ ತಕಾವಿ ಸಾಲವನ್ನು ಕೊಟ್ಟರೆ ಅವರ ಜಮೀನನ್ನು ಅಭಿವೃದ್ಧಿ ಮಾಡಿಕೊಳ್ಳುವುದಕ್ಕೆ ಸಹಕಾರಿಯಾಗುತ್ತದಲ್ಲವೆ ?

Sri M. V. KRISHNAPPA.—We will consider it.

ಶ್ರೀ ಕೆ. ಪಿ. ರೇವಣಸಿದ್ಧಪ್ಪ.—ಮಾನ್ಯ ಮಂತ್ರಿಗಳು 250 ದರಖಾಸ್ತುಗಳಿದ್ದರೆ ಅಲ್ಲಗೆ ಬರುತ್ತೇನೆಂದು ಹೇಳಿದರು. ಇವರು ರೆವಿನ್ಯೂ ಮಂತ್ರಿ ಆದಾಗಿನಿಂದ ಬರಲಿಲ್ಲ. ಈಗ ಇವರೇನೋ ಪಾರ್ಲಮೆಂಟಿಗೆ ಹೋಗುತ್ತಾರೆಂದು ಕೇಳುತ್ತಿದ್ದೇನೆ .....

ಶ್ರೀ ಎಂ ವಿ. ಕೃಷ್ಣಪ್ಪ.—ನಾನು ಎಲ್ಲಿದ್ದರೇನು ? ಅವರು ಇಲ್ಲಿ ಇರುತ್ತಾರೋ ಇಲ್ಲವೋ ನನಗೆ ಅನುಮಾನವಾಗುತ್ತಿದೆ.